ಯಾವುದಾದರೂ ಒಂದು ಯೋಜನೆಯನ್ನು ಕೊಟ್ಟು ನಮ್ಮ ಜಿಲ್ಲೆಯನ್ನು, ರೈತರನ್ನು ರಕ್ಷಣೆ ಮಾಡ ಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನಾನು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ದಿನಾಂಕ ೨೧-೩-೧೯೯೦ರಂದು ಸದನದಲ್ಲಿ ತಿಳಿಸಿದಂತೆ ಹೊಸದಾಗಿ ರಚಿತವಾಗಿರುವ ಕರ್ನಾಟಕ ವಿಧಾನಸಭೆಯ ನಿಯಮಾವಳಿಗಳ ಸಮಿತಿಗೆ ಈ ಕೆಳಕಂಡ ಸದಸ್ಯರನ್ನು ನಾಮನಿರ್ದೇಶನ ಮಾಡಿರುತ್ತೇನೆ.

೧.	ಶ್ರೀ ಎಂ. ವೀರಪ್ಪಮೊಯಿಲಿ	ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮಂತ್ರಿಗಳು.
೨.	ಶ್ರೀ ಡಿ. ಬಿ. ಚಂದ್ರೇಗೌಡ	ವಿರೋಧ ಪಕ್ಷದ ನಾಯಕರು
೩.	ಶ್ರೀ ಬಿ. ಎಸ್. ಯಡಿಯೂರಪ್ಪ	ಭಾರತೀಯ ಜನತಾಪಕ್ಷದ ಅಧ್ಯಕ್ಷರು ಮತ್ತು ಶಾಸಕರು
೪.	ಶ್ರೀ ಸಿ. ಭೈರೇಗೌಡ	ಶಾಸಕರು
೫.	ಶ್ರೀ ಮುಲ್ಲಾರಗೌಡ ಎಸ್. ಪಾಟೀಲ್	ಸರ್ಕಾರಿ ಮುಖ್ಯ ಸಚೇತಕರು, ವಿಧಾನಸಭೆ
೬.	ಶ್ರೀ ಎಂ. ವಿ. ವೆಂಕಟಪ್ಪ	ಶಾಸಕರು
೭.	ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ	ಶಾಸಕರು

ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆದಾಗ, ನಾಳೆ ಆಯವ್ಯಯದ ಮೇಲಿನ ಚರ್ಚೆ ಮುಕ್ತಾಯವಾಗಬೇಕು. ನಾಳೆಯೇ ಹಣಕಾಸಿನ ಸಚಿವರು ಆಯವ್ಯಯ ಚರ್ಚೆಗೆ ಅವರು ಉತ್ತರ ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ನನ್ನ ಲಿಸ್ಟ್‌ನ ಪ್ರಕಾರ ಬಹಳ ಜನ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸುವ ಆಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಸದನ ಒಪ್ಪುವುದಾದರೆ ನಾಳೆ ಬೆಳಿಗ್ಗೆ ನಾವು ಸಮಾವೇಶಗೊಂಡು ನಾಳೆ ಮಧ್ಯಾಹ್ನದವರೆಗೆ ಈ ಚರ್ಚೆಯಲ್ಲಿ ಎಷ್ಟು ಜನ ಮಾನ್ಯ ಸದಸ್ಯರು ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ ಅವರಿಗೆ ಅನುವು ಮಾಡಿಕೊಟ್ಟು ಆನಂತರ ಮಾನ್ಯ ಹಣಕಾಸಿನ ಸಚಿವರು ೨೮ನೇ ತಾರೀಖು ಚರ್ಚೆಗೆ ಉತ್ತರ ಕೊಡುವುದಕ್ಕೆ ಸಭೆ ಒಪ್ಪುವುದಾದರೆ ಆಗ ಬಹುದು.

(ಮಾನ್ಯ ಸದಸ್ಯರೆಲ್ಲರೂ ಆಗಬಹುದೆಂದು ತಮ್ಮ ಒಪ್ಪಿಗೆ ಸೂಚಿಸಿದರು)

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಕರ್ನಾಟಕ ಪವರ್ ಕಾರ್ಪೊರೇಷನ್ನಿನ ಗ್ರಾಜುಯೇಟ್ ಇಂಜಿನಿಯರುಗಳು ೨೪ನೇ ತಾರೀಖು ಮುಷ್ಕರ ಹೂಡುವ ಬಗ್ಗೆ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಅವರು ಒಂದು ಸ್ಟೇಟ್‌ಮೆಂಟನ್ನು ಕೊಡಿದ್ದಾರೆ. Essencial Servicesses Act ನ್ನು revoke ಮಾಡಿ ಅದರ ಪ್ರಕಾರ ಸ್ಟ್ರೈಕ್ ಅನ್ನು ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಜೊತೆಗೆ ಅವರು ಹೇಳಿದ್ದಾರೆ, ಈ ಮುಷ್ಕರ ನಡೆಯುವುದರಿಂದ ದಿವಸಕ್ಕೆ ಒಂದು ಕೋಟಿ ಮತ್ತು ಕ್ಯೂಗಾರಿಕಾ ಕ್ಷೇತ್ರದಲ್ಲಿ ೧೧ ಕೋಟಿ ಒಟ್ಟು ೧೨ ಕೋಟಿ ರೂಪಾಯಿ ರಾಜ್ಯದ exchequer ಮೇಲೆ ಪ್ರತಿದಿನ ಬರ್ಡನ್ ಇದೆ. ಇದರ ಸಂಬಂಧದಲ್ಲಿ ಅವರು ಸ್ಟ್ರೈಕ್ ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಬೆಳಿಗ್ಗೆ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವುದಾಗಿ ಹೇಳಿದ್ದರು, ತಾವು ಕೂಡ ಅದನ್ನು ಒಪ್ಪಿ ಕೊಂಡಿದ್ದೀರಿ. ಮಾನ್ಯ ಸಚಿವರು ಹೇಳಿಕೆ ಕೊಡುವುದಕ್ಕೆ ತಯಾರಿದ್ದಾರೆ, ತಾವು ಅದಕ್ಕೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಅವರು ೨೪ನೇ ತಾರೀಖಿನಿಂದ ಮುಷ್ಕರ ಹೋಗು ವುದಾಗಿ ಏನು ಸೂಚನೆಯನ್ನು ಕೊಟ್ಟಿದ್ದಾರೆ. ಈ ಚಳುವಳಿಯು ಕರೆಯಿಂದ ೨೪ನೇ ತಾರೀಖಿನ ದಿವಸ ಇಡೀ ರಾಜ್ಯದಲ್ಲೇ ಕಗ್ಗತ್ತಲು ಕವಿಯುತ್ತದೆ ಎನ್ನುವ ಭೀತಿ ಇದೆ. ಈ ಪ್ರಶ್ನೆ ಉದ್ಭವವಾದರೆ ಸರ್ಕಾರದ ನಿರ್ಧಾರ ಏನು ?